

# ಇಪ್ಪತ್ತೈದು ವಾದ್ಯ ನಿಪುಣ ಪ್ರಸನ್ನ

**ಬೆಂಗಳೂರಿನ ಎಸ್.ಜೆ. ಪ್ರಸನ್ನ 25 ವಾದ್ಯಗಳ ನುಡಿಸಾಣಿಕೆಯಲ್ಲಿ ಪರಿಣತಿ ಸಾಧಿಸಿದ್ದಾರೆ. ಏಕಕಾಲಕ್ಕೆ ಐದಾರು ವಾದ್ಯಗಳನ್ನು ನುಡಿಸುವುದು ಇವರ ವೈಶಿಷ್ಟ್ಯ. ದೇಶಾದ್ಯಂತ 1500ಕ್ಕೂ ಹೆಚ್ಚು ವಾದ್ಯಗೋಷ್ಠಿ ನಡೆಸಿರುವ ಅಗ್ಗಳಿಕೆ ಅವರದು.**

■ ಉಮಾ ಅನಂತ್

ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ವೃದ್ಧಾಶ್ರಮದಲ್ಲಿ ವಾರ್ಷಿಕೋತ್ಸವ ಸಮಾರಂಭ. ಬಹುವಾದ್ಯ ನಿಪುಣ ಎಸ್.ಜೆ. ಪ್ರಸನ್ನ ಅವರ ವಾದ್ಯಗೋಷ್ಠಿ. ಕೊಳಲು, ಮೆಲೊಡಿಕ, ಅಕಾರ್ಡಿಯನ್, ಸ್ಯಾಕ್ಸೊಫೋನ್, ಏರೊಫೋನ್, ಸೊಪ್ರನೊ, ಕೀಬೋರ್ಡ್ ಎಲ್ಲವನ್ನೂ ಒಬ್ಬರೇ ಒಂದಾದ ಮೇಲೆ ಒಂದರಂತೆ ನುಡಿಸಿದರು. ಅದಾಗಿ ಬಾಯಿಯಲ್ಲಿ ಮೌತ್ ಆರ್ಗನ್ ನುಡಿಸುತ್ತಾ ಕೈಯಲ್ಲಿ ಮೈಕ್ ಹಿಡಿದು ಇನ್ನೊಂದು ಕೈಯನ್ನು ಜೇಬಿಗಿಳಿಸುತ್ತಾ ಡ್ಯಾನ್ಸ್ ಮಾಡಿದರು. ಅಲ್ಲಿದ್ದ ವೃದ್ಧರು ಅಚ್ಚರಿಗೊಂಡರು. ವೇದಿಕೆ ಏರಿ ಮಕ್ಕಳ ಹಾಗೆ ಪ್ರಸನ್ನ ಅವರೊಂದಿಗೆ ಹೆಜ್ಜೆ ಹಾಕಿದರು.

ಇದು ಒಂದು ಕಾರ್ಯಕ್ರಮದ ಅಚ್ಚರಿಯಲ್ಲ. ಪ್ರಸನ್ನ ದೇಶದಾದ್ಯಂತ ಸಾವಿರಾರು ವಾದ್ಯಗೋಷ್ಠಿ ನಡೆಸಿದ್ದಾರೆ. ಪ್ರತಿಯೊಂದು ಕಛೇರಿಯಲ್ಲೂ ಒಂದಲ್ಲ ಒಂದು ಅಚ್ಚರಿ ಇದ್ದೇ ಇರುತ್ತದೆ. ಸಂಗೀತದಲ್ಲಿ ಎಲ್ಲರಿಗಿಂತ ವಿಭಿನ್ನವಾಗಿ ತಮ್ಮದೇ ಆದ 'ಐಡೆಂಟಿಟಿ' ಇರಬೇಕೆನ್ನುವುದು ಅವರ ಹಂಬಲ. ಹೊಸ ಹೊಸ ವಾದ್ಯ ಕೊಳ್ಳುವುದು, ಕಲಿಯುವುದು, ನುಡಿಸುವುದು ಇವರಿಗೆ ಕ್ರೇಜ್.

ಈ ವಿಶಿಷ್ಟ ಸಂಗೀತಗಾರ ತಂತಿವಾದ್ಯಗಳನ್ನು ಮೀಟುತ್ತಾ, ಸುಷಿರ ವಾದ್ಯಗಳನ್ನು ನುಡಿಸುತ್ತಾ, ಪುಂಗಿ ಊದುತ್ತಾ, ಹಾರ್ಮೋನಿಯಂ, ಅಕಾರ್ಡಿಯನ್, ಮೋರ್ಚಿಂಗ್, ಮೌತ್ ಆರ್ಗನ್‌ಗಳಂತಹ ವಾದ್ಯಗಳನ್ನು ನುಡಿಸುತ್ತಾ ನೃತ್ಯ ಮಾಡುತ್ತಾರೆ. ಜನಪ್ರಿಯ ಸಿನಿಮಾ ಹಾಡುಗಳನ್ನು ವಾದ್ಯಗಳಲ್ಲಿ ಕೇಳಿದಾಗ ಕೇಳುಗರು ರೋಮಾಂಚನಗೊಳ್ಳುತ್ತಾರೆ, ಶಿಳ್ಳೆ ಹಾಕುತ್ತಾರೆ, ವಾದ್ಯಗಳ ದನಿಯನ್ನು ಕಿವಿಯಾನಿಸಿ ಕೇಳಿಸಿಕೊಂಡು ತಾವೂ ಅನುಸರಿಸುತ್ತಾರೆ.

ಈ ವಿಶಿಷ್ಟ ವಾದ್ಯಗಾರನನ್ನು 'ಸುಧಾ' ಮಾತಿಗೆಳೆದಾಗ ಅವರು ಹೇಳಿದ್ದಿಷ್ಟು:

"ನಾನು ಇಪ್ಪತ್ತೈದು ವಾದ್ಯ ನುಡಿಸುತ್ತೇನೆ.



ಕರ್ನಾಟಕ ಸಂಗೀತ, ಹಿಂದೂಸ್ತಾನಿ ಹಾಗೂ ಪಾಶ್ಚಾತ್ಯ ಸಂಗೀತ ಮೂರನ್ನೂ ಕಲಿತಿರುವೆ. ಒಂದೊಂದು ವಾದ್ಯಕ್ಕೂ ಇಬ್ಬರು ಅಥವಾ ಮೂರು ಮಂದಿ ಗುರುಗಳು. ಹೀಗೆ ಸುಮಾರು ಐವತ್ತು ಮಂದಿ ಪರಿಣತರಲ್ಲಿ ವಾದ್ಯ ನುಡಿಸಾಣಿಕೆ ಕ್ರಮ ಕಲಿತುಕೊಂಡೆ. ಆರ್. ರತ್ನ ಅವರು, ಸಿನಿಮಾ ಹಾಡುಗಳನ್ನು ಕಲಿಸಿದ್ರು. ಜೇಮ್ಸ್ ಅವರ ಬಳಿ ಕೀಬೋರ್ಡ್, ಸತ್ಯನಾರಾಯಣ ಅವರ ಬಳಿ ಮ್ಯಾಂಡೊಲಿನ್ ಮತ್ತು ಗಿಟಾರ್, ಮಾರಿ ಕುಮಾರ್ ಬಳಿ ಸ್ಯಾಕ್ಸೊಫೋನ್ ಮತ್ತು ಕ್ಲಾರಿಯೊನೆಟ್, ಪ್ರಕಾಶ್ ಹೆಗಡೆ ಬಳಿ ಕೊಳಲು, ನರಸಿಂಹಲು ವಡವಾಟಿ ಬಳಿ ಕ್ಲಾರಿಯೊನೆಟ್ ಕಲಿತೆ. ಹೀಗೆ ಒಂದೊಂದು ವಾದ್ಯವನ್ನೂ ಕಲಿತು ನುಡಿಸಲಾರಂಭಿಸಿದೆ. ವಾದ್ಯಗಳ ಮೇಲೆ ನನಗೆ ಮೊದಲಿನಿಂದಲೂ ಎಲ್ಲಿಲ್ಲದ ಆಕರ್ಷಣೆ.

2006ನೇ ಇಸವಿ. ಟೀವಿ ವಾಹಿನಿಯಲ್ಲಿ 'ಎದೆ ತುಂಬಿ ಹಾಡುವೆನು' ರಿಯಾಲಿಟಿ ಶೋ ಬರ್ತಾ ಇತ್ತು. ಎಸ್.ಪಿ. ಬಾಲಸುಬ್ರಹ್ಮಣ್ಯಮ್ ಅವರು ಆ ಕಾರ್ಯಕ್ರಮವನ್ನು ನಿರೂಪಿಸುತ್ತಿದ್ದರು. ನಾನು ಒಂದು ಎಪಿಸೋಡ್‌ಗೆ ಅತಿಥಿಯಾಗಿ ಹೋಗಿದ್ದೆ. ಆಗ ಅಕಾರ್ಡಿಯನ್, ಮೌತ್ ಆರ್ಗನ್ ಮತ್ತು ಕೀಬೋರ್ಡ್ – ಈ ಮೂರು ವಾದ್ಯಗಳನ್ನು